# ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಕಲಬುರಗಿ

## ಅಧಿಸೂಚನೆ ಸಂಖ್ಯೆ 20/2023

ಈ ಮೂಲಕ ಸಾರ್ವಜನಿಕರ ಗಮನಕ್ಕೆ ತರುವುದೇನೆಂದರೆ, ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಕಲಬುರಗಿರವರ ಅಧಿಸೂಚನೆ ಸಂಖ್ಯೆ ಡಿಸಿಕೆ/ಎಡಿಎಮ್ಎನ್/13/2023, 14/2023, 16/2023 ಮತ್ತು 17/2023 ದಿನಾಂಕಃ 24-02-2023ರ ಪ್ರಕಾರ 08-ಶೀಘ್ರಲಿಪಿಗಾರರು (ಸ್ಥಳೀಯ ವೃಂದ-5 ಮತ್ತು ಮಿಕ್ಕುಳಿದ ವೃಂದ-03), 09-ಬೆರಳಚ್ಚುಗಾರರು (ಸ್ಥಳೀಯ ವೃಂದ-6 ಮತ್ತು ಮಿಕ್ಕುಳಿದ ವೃಂದ-03), 13-ಆದೇಶಜಾರಿಕಾರರು (ಸ್ಥಳೀಯ ವೃಂದ-9 ಮತ್ತು ಮಿಕ್ಕುಳಿದ ವೃಂದ-04) ಮತ್ತು 29-ಜವಾನರ (ಸ್ಥಳೀಯ ವೃಂದ-26 ಮತ್ತು ಮಿಕ್ಕುಳಿದ ವೃಂದ-03) ಖಾಲಿ ಹುದ್ದೆಗಳಿಗೆ ಅರ್ಜಿಯನ್ನು ಆನ್‌ಲೈನ ಮುಖಾಂತರ ಸಲ್ಲಿಸಲು ದಿನಾಂಕ 25-3-2023ನ್ನು ನಿಗದಿಪಡಿಸಲಾಗಿತ್ತು, ಆದರೆ ಮಾನ್ಯ ಉಚ್ಛ ನ್ಯಾಯಾಲಯ, ಬೆಂಗಳೂರುರವರ ಪತ್ರ ಸಂಖ್ಯೆ ಡಿಜೆಎ-II 400/2021 ದಿನಾಂಕ 06.03.2023 ಈ ಕಛೇರಿಗೆ ದಿನಾಂಕ 18.03.2023 ರಂದು ಸ್ವೀಕೃತವಾಗಿದ್ದು ಸದರಿ ಪತ್ರದಲ್ಲಿ ಸರ್ಕಾರದ ಸುತ್ತೋಲೆ ಸಂಖ್ಯೆ ಸಿಆಸುಇ 03 ಹೈಕಕೋ 2019 ದಿನಾಂಕ 01.02.2023 ರನ್ನು ಅಡಕವಿಟ್ಟು ಸದರಿ ಸುತ್ತೋಲೆಯನ್ವಯ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ. ಸರ್ಕಾರದ ಸದರಿ ಸುತ್ತೋಲೆಯು ಕಲ್ಯಾಣ ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳಿಗೆ ಮೀಸಲಿಸಿರುವ ನೇರ ನೇಮಕಾತಿ ಹುದ್ದೆಗಳನ್ನು ಭರ್ತಿ ಮಾಡುವಲ್ಲಿ ವಿವಿಧ ನೇಮಕಾತಿ ಪ್ರಾಧಿಕಾರಗಳು ಪಾಲಿಸಬೇಕಾದ ವಿಧಿ-ವಿಧಾನಗಳ ಬಗ್ಗೆ ಸೂಚನೆ ನೀಡಲಾಗಿರುತ್ತದೆ. ಆದರೆ ಈ ಕಛೇರಿಯಿಂದ ಈ ಮೊದಲೇ ದಿನಾಂಕ 24.02.2023 ರಂದೇ ಮೇಲೆ ಹೇಳಿದ ವಿವಿಧ ಹುದ್ದೆಗಳಲ್ಲಿ ಖಾಲಿ ಹುದ್ದೆಗಳನ್ನು ತುಂಬಲು ಅಧಿಸೂಚನೆಗಳನ್ನು ಹೊರಡಿಸಲಾಗಿರುತ್ತದೆ. ಆದ್ದರಿಂದ ದಿನಾಂಕ 01.02.2023 ರ ಸರ್ಕಾರಿ ಸುತ್ತೋಲೆಯನ್ವಯ ಆಸಕ್ತಿವುಳ್ಳ ಅರ್ಹ ಅಭ್ಯರ್ಥಿಗಳ ಗಮನಕ್ಕೆ ಹಾಗೂ ಈಗಾಗಲೇ ಈ ಹಿಂದಿನ ಅಧಿಸೂಚನೆಗಳಿಗೆ ಅರ್ಜಿ ಸಲ್ಲಿಸಿದ ಅಭ್ಯರ್ಥಿಗಳ ಗಮನಕ್ಕೆ ಮತ್ತು ಸಾರ್ವಜನಿಕರ ಗಮನಕ್ಕೆ ಈ ಅಧಿಸೂಚನೆ ಮುಖಾಂತರ ಈ ಕೆಳಗಿನಂತೆ ನಿರ್ದೇಶನಗಳನ್ನು ನೀಡಲಾಗಿದೆ.

ದಿನಾಂಕ 01.02.2023 ರ ಸರ್ಕಾರಿ ಸುತ್ತೋಲೆ ಹಾಗೂ ಸದರಿ ಸುತ್ತೋಲೆಯಲ್ಲಿ ಉಲ್ಲೇಖಿತ ಸುತ್ತೋಲೆ ಸಂಖ್ಯೆ ಸಿಆಸುಇ 03 ಹೈಕಕೋ 2018 ದಿನಾಂಕ 15.06.2022 ರನ್ವಯ ಮಿಕ್ಕುಳಿದ ವೃಂದ ಹಾಗೂ ಸ್ಥಳೀಯ ವೃಂದದ ಹುದ್ದೆಗಳಿಗೆ ಅರ್ಜಿ ಆಹ್ವಾನಿಸುವ ಅಧಿಸೂಚನೆಗಳನ್ನು ಪ್ರತ್ಯೇಕವಾಗಿ ಹೊರಡಿಸಿ ಪ್ರತ್ಯೇಕವಾಗಿ ಸ್ಪರ್ಧಾತ್ಮಕ ಪರೀಕ್ಷೆ ನಡೆಸಿ, ನೇಮಕಾತಿ ಪ್ರಕ್ರಿಯೆ ಕೈಗೊಳ್ಳುವಂತೆ ಸೂಚಿಸಲಾಗಿದೆ. ಮುಂದೆವರೆದು ದಿನಾಂಕ 06.06.2020 ರ ಸುತ್ತೋಲೆನ್ವಯ ನೇಮಕಾತಿ ಅಧಿಸೂಚನೆ ಹೊರಡಿಸಿ ಅಂತಿಮ ಆಯ್ಕೆ ಪಟ್ಟಿ ಪ್ರಕಟಿಸದೇ ಇದ್ದಲ್ಲಿ ಅಂತಹ ನೇಮಕಾತಿ ಪ್ರಕ್ರಿಯೆಗಳಿಗೆ ಸೀಮಿತವಾಗಿ ಮಾತ್ರ ಅರ್ಜಿ ಸಲ್ಲಿಸುವ ಸಮಯದಲ್ಲಿ ಸ್ಥಳೀಯ ಅಭ್ಯರ್ಥಿಗಳಿಂದ ಪಡೆಯಲಾಗಿರುವ ಆಯ್ಕೆಯನ್ನು ಪರಿಗಣಿಸದೇ ಮೆರಿಟ ಪಟ್ಟಿಯಿಂದ

ಆಯ್ಕೆ ಪಟ್ಟಿ ತಯಾರಿಸುವಲ್ಲಿ ಸ್ಥಳೀಯ ಅಭ್ಯರ್ಥಿಗಳನ್ನು ಮೊದಲಿಗೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ ಪರಿಗಣಿಸಿ ಆಯ್ಕೆ ಪಟ್ಟಿ ತಯಾರಿಸುವುದು ನಂತರ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಪರಿಗಣಿಸಿ ಆಯ್ಕೆ ಪಟ್ಟಿ ತಯಾರಿಸುವಂತೆ ಸೂಚಿಸಿರುವುದರಿಂದ, ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಪ್ರತ್ಯೇಕವಾಗಿ ಅಧಿಸೂಚನೆ ಹೊರಡಿಸುವುದು ಅವಶ್ಯವಾಗಿರುವುದರಿಂದ, **03-ಶೀಘ್ರಲಿಪಿಗಾರರು, 03-ಬೆರಳಚ್ಚುಗಾರರು, 04-**ಆದೇಶಜಾರಿಕಾರರು **ಮತ್ತು 3-**ಜವಾನರ ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಪ್ರತ್ಯೇಕವಾದ ಅಧಿಸೂಚನೆಗಳನ್ನು ಈ ಕಛೇರಿಯಿಂದ ಸದ್ಯದಲ್ಲಿಯೇ ಹೊರಡಿಸಲಾಗುವುದು.

ಮುಂದುವರೆದು ಸ್ಥಳೀಯ ವೃಂದದ ಅಭ್ಯರ್ಥಿಗಳ ಗಮನಕ್ಕೆ ತರುವುದೇನೆಂದರೆ ಸದರಿ ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಬಯಸಿದಲ್ಲಿ ಪ್ರತ್ಯೇಕವಾಗಿ ಹೊರಡಿಸುವ ಅಧಿಸೂಚನೆಯ ಹುದ್ದೆಗಳಿಗೆ ಅರ್ಜಿ ಸಲ್ಲಿಸಬೇಕು ಹಾಗೂ ಈಗಾಗಲೇ ಸದರಿ ಸ್ಥಳೀಯ ಅಭ್ಯರ್ಥಿಗಳು ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಹಿಂದಿನ (ಚಾಲ್ತಿ) ಅಧಿಸೂಚನೆಗಳಲ್ಲಿ ಆಯ್ಕೆಯನ್ನು (ಮೊದಲನೇ ಆಯ್ಕೆ ಮತ್ತು ಎರಡನೇ ಆಯ್ಕೆ) ಕೋರಿದ್ದಲ್ಲಿ ಅದನ್ನು **ಪರಿಗಣಿಸಲಾಗುವುದಿಲ್ಲ** ಎಂದು ಸ್ಪಷ್ಟಪಡಿಸಲಾಗಿದೆ.

ಮುಂದುವರೆದು ಸ್ಥಳೀಯೇತರ ಅಭ್ಯರ್ಥಿಗಳು **ಕೇವಲ ಮಿಕ್ಕುಳಿದ ವೃಂದದ** ಹುದ್ದೆಗಳಿಗೆ ಅರ್ಜಿಗಳನ್ನು ಈಗಾಗಲೇ ಹಿಂದಿನ (ಚಾಲ್ತಿ) ಅಧಿಸೂಚನೆಗಳಲ್ಲಿ ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ ಅಂತಹ ಅಭ್ಯರ್ಥಿಗಳು ಇನ್ನು ಮುಂದೆ ಮಿಕ್ಕುಳಿದ ವೃಂದದ ಹುದ್ದೆಗಳಿಗೆ ಹೊರಡಿಸುವ ಪ್ರತ್ಯೇಕ ಅಧಿಸೂಚನೆಗಳಿಗೆ ಮತ್ತೊಮ್ಮೆ ಅರ್ಜಿಯನ್ನು ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ ಅಂತಹ ಅರ್ಜಿಗಳನ್ನು ಮಾತ್ರ ಪರಿಗಣಿಸಲಾಗುವುದು ಎಂದು ಸ್ಪಷ್ಟಪಡಿಸಲಾಗಿದೆ.

ಸಹಿ/-

(ಕೆ.ಬಿ.ಪಾಟೀಲ)

**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು**

ಕಲಬುರಗಿ